# ನಿವೇದನೆ

## ಷಟ್ಪಥ-ದಶಪಥಗಳೆಂಬ ಹೆದ್ದಾರಿಗಳ ಪ್ರಭೆಯಲ್ಲಿ ದೀನ-ದಲಿತರ ಬದುಕಿನ ದಾರಿಗಳ ನಿರ್ಲಕ್ಷ್ಯ

**ಸ್ವಾತಂತ್ರ್ಯಪೂರ್ವದ ‘ದಾಂಡಿ ಯಾತ್ರೆ’ ದೇಶಪ್ರೇಮಿಗಳಲ್ಲಿ ಸ್ವಾತಂತ್ರ್ಯದ ಕಿಚ್ಚು ಹೆಚ್ಚಿಸುವುದರೊಂದಿಗೆ, ಅಪಾರ ಆತ್ಮವಿಶ್ವಾಸ ಮೂಡಿಸಿತ್ತು. ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯ ವರ್ಷದಲ್ಲಿ ನಡೆದಿರುವ ಒಡಿಶಾದ ಕಾರ್ಮಿಕರ ಕಾಲ್ನಡಿಗೆಯ ವಿದ್ಯಮಾನ ವಿಷಾದ ಹುಟ್ಟಿಸುವಂತಹದ್ದು.**


ದುಡಿಮೆಗೆ ಸಂಬಳ ಸಿಗದೆ ಹತಾಶರಾದ ಮೂವರು ಕಾರ್ಮಿಕರು ಬೆಂಗಳೂರಿನಿಂದ ಒಡಿಶಾಕ್ಕೆ ನಡೆದುಕೊಂಡೇ ಹೋಗಿರುವ ಘಟನೆ ದಿಗ್ಭ್ರಮೆ ಹುಟ್ಟಿಸುವಂತಹದ್ದು. ಕೆಲಸ ಅರಸಿಕೊಂಡು ಬೆಂಗಳೂರಿಗೆ ಬಂದಿದ್ದ ಒಡಿಶಾದ ಬುದು ಮಾಂಝಿ, ಕತರ್ ಮಾಂಝಿ ಹಾಗೂ ಭಿಕಾರಿ ಮಾಂಝಿ ಎನ್ನುವ ಯುವಕರು, ಬೆಂಗಳೂರಿನಲ್ಲಿ ಎರಡು ತಿಂಗಳು ದುಡಿದರೂ ಸಂಬಳ ಸಿಗದ ಕಾರಣಕ್ಕಾಗಿ ನಿರಾಶರಾಗಿ ತವರಿಗೆ ಮರಳಿದ್ದಾರೆ. ಪ್ರಯಾಣದ ವೆಚ್ಚ ಭರಿಸಲು ಹಣವಿಲ್ಲದೆ 1000 ಕಿ.ಮೀ.ಗೂ ಹೆಚ್ಚು ದೂರವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿದ್ದಾರೆ.

ಮಧ್ಯವರ್ತಿಯ ಮೂಲಕ ಬೆಂಗಳೂರಿನಲ್ಲಿ ಕೆಲಸ ಮಾಡಿದ್ದ ಕಾರ್ಮಿಕರಿಗೆ ಸಂಬಳ ಮರೀಚಿಕೆಯಾಗಿಯೇ ಉಳಿದಿದೆ. ಸಂಬಳ ಕೇಳಿದಾಗಲೆಲ್ಲ ಮಾಲೀಕ ತನ್ನ ಸಿಬ್ಬಂದಿಯಿಂದ ಹಲ್ಲೆ ಮಾಡಿಸುತ್ತಿದ್ದ ಎನ್ನಲಾಗಿದೆ. ಕುಟುಂಬಕ್ಕೆ ನೆರವು ನೀಡುವ ಉದ್ದೇಶದಿಂದ ನೌಕರಿ ಹುಡುಕಿಕೊಂಡು ಬೆಂಗಳೂರಿಗೆ ವಲಸೆ ಬಂದಿದ್ದ ಕಾರ್ಮಿಕರು ಎರಡು ತಿಂಗಳ ನಂತರ ಬರಿಗೈಯಲ್ಲಿ ಊರಿಗೆ ಮರಳಿದ್ದಾರೆ. ಮನೆ ಸೇರುವ ವೇಳೆಗೆ ಮೂವರ ಸ್ಥಿತಿ ಶೋಚನೀಯವಾಗಿತ್ತು ಎಂದು ಹೇಳಲಾಗಿದೆ. ಸ್ವಾತಂತ್ರ್ಯ ಚಳವಳಿಯ ಬಹು ಮುಖ್ಯ ಘಟ್ಟಗಳಲ್ಲೊಂದಾದ ‘ದಾಂಡಿ ಯಾತ್ರೆ’ಯ ಆಸುಪಾಸಿನಲ್ಲೇ ಈ ಘಟನೆ ನಡೆದಿದೆ. 1930ರ ಮಾರ್ಚ್ 12ರಂದು ಗುಜರಾತಿನ ಸಾಬರಮತಿಯಿಂದ ಕಾಲ್ನಡಿಗೆ ಆರಂಭಿಸಿದ್ದ ಮಹಾತ್ಮ ಗಾಂಧಿ, ಏಪ್ರಿಲ್ 6ರಂದು ದಾಂಡಿ ತಲುಪಿ, ಅಲ್ಲಿನ ಸಮುದ್ರ ಕಿನಾರೆಯಲ್ಲಿ ಉಪ್ಪು ತಯಾರಿಸುವ ಮೂಲಕ ಕಾನೂನುಭಂಗ ಮಾಡಿದ್ದರು. ಸ್ವಾತಂತ್ರ್ಯಪೂರ್ವದ ಆ ಘಟನೆ ದೇಶಪ್ರೇಮಿಗಳಲ್ಲಿ ಸ್ವಾತಂತ್ರ್ಯದ ಕಿಚ್ಚು ಹೆಚ್ಚಿಸುವುದರೊಂದಿಗೆ, ಅಪಾರ ಆತ್ಮವಿಶ್ವಾಸವನ್ನೂ ಉಂಟುಮಾಡಿತ್ತು. ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆಯ ವರ್ಷದಲ್ಲಿ ನಡೆದಿರುವ ಕಾರ್ಮಿಕರ ಕಾಲ್ನಡಿಗೆಯ ಇಂದಿನ ಘಟನೆ ವಿಷಾದ ಹುಟ್ಟಿಸುವಂತಹದ್ದು. ಈ ಘಟನೆ, ಬಡವರ ಅಸಹಾಯಕ ಸ್ಥಿತಿಯೊಂದಿಗೆ ಕಾರ್ಮಿಕ ಕಾನೂನುಗಳು ಬಲ ಕಳೆದುಕೊಂಡಿರುವುದನ್ನು ಸೂಚಿಸುವಂತಿದೆ.

ಸಾವಿರ ಕಿಲೋಮೀಟರ್‌ಗಳನ್ನು ಕಾಲ್ನಡಿಗೆಯಲ್ಲಿ ಸವೆಸಿದ ಕಾರ್ಮಿಕರ ದುಸ್ಥಿತಿಯ ಬಗ್ಗೆ ಕಾರ್ಮಿಕ ಇಲಾಖೆಗೆ ಯಾವ ಮಾಹಿತಿಯೂ ಇಲ್ಲ. ಸಂಬಳ ಸಿಗದ ಕಾರ್ಮಿಕರು ಒಡಿಶಾದವರೆಗೆ ನಡೆದುಹೋಗುವ ಬದಲು, ಕಾರ್ಮಿಕ ಇಲಾಖೆಗೆ ದೂರು ನೀಡಿದ್ದರೆ ಸಂಬಂಧಿಸಿದ ಕಂಪನಿಯ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿತ್ತು ಎಂದು ಕಾರ್ಮಿಕ ಇಲಾಖೆ ಆಯುಕ್ತರು ತಿಳಿಸಿದ್ದಾರೆ. ಆಯುಕ್ತರು ಮಾತನಾಡುತ್ತಿರುವುದು ತಾಂತ್ರಿಕವಾಗಿ ಸರಿ. ಆದರೆ, ಕಾರ್ಮಿಕರಿಗೆ ಸಂಬಳ ನೀಡದೆ ಇರುವ ಮಾಲೀಕರ ಕ್ರೌರ್ಯದ ಸ್ಥಿತಿಗೆ ಕಾರ್ಮಿಕ ಇಲಾಖೆ ಬೆನ್ನುಮೂಳೆ ಕಳೆದುಕೊಂಡಿರುವುದೂ ಕಾರಣವಾಗಿದೆ. ಅನ್ಯಾಯ–ದೌರ್ಜನ್ಯಕ್ಕೆ ಒಳಗಾದವರಿಗೆ ನೆರವಾಗಲು ಸಾಂವಿಧಾನಿಕ ವ್ಯವಸ್ಥೆಯಲ್ಲಿ ಹಲವು ಕಾನೂನುಗಳು ಇರುವುದು ನಿಜ. ಆದರೆ, ಅಸಹಾಯಕರ ಪಾಲಿಗೆ ಆ ಕಾನೂನುಗಳು ಗಗನಕುಸುಮಗಳಾಗಿಯೇ ಉಳಿದಿವೆ. ಈಗಲೂ ಅನೇಕ ಸಂಸ್ಥೆಗಳು ಕಾರ್ಮಿಕರಿಗೆ ಸೂಕ್ತ ಸೌಲಭ್ಯಗಳನ್ನು ನೀಡದೆ ವಂಚಿಸುತ್ತಿವೆ. ಹೆಚ್ಚುವರಿ ಕೆಲಸ ಮಾಡಿಸಿಕೊಂಡು ಸೂಕ್ತ ಸಂಬಳ ಕೊಡದೆ ಸತಾಯಿಸುತ್ತಿವೆ. ಸರ್ಕಾರದ ನೀತಿನಿಯಮಗಳೂ ಕಾರ್ಮಿಕರ ಹಿತಾಸಕ್ತಿಗೆ ಪೂರಕವಾಗಿಲ್ಲ. ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸುವ ಕಾರಣ ನೀಡಿ, ಕಾರ್ಖಾನೆಗಳಲ್ಲಿನ ಕೆಲಸದ ಅವಧಿಯನ್ನು 9ರಿಂದ 12 ಗಂಟೆಗಳಿಗೆ ಹೆಚ್ಚಿಸಲಾಗಿದೆ. ಆಸಕ್ತ ಮಹಿಳೆಯರಿಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗಿದೆ. ದಿನಕ್ಕೆ ಹನ್ನೆರಡು ತಾಸುಗಳಂತೆ ನಾಲ್ಕು ದಿನಗಳ ಕಾಲ ಕೆಲಸ ಮಾಡಿದರೆ, ವಾರದ ಉಳಿದ ಮೂರು ದಿನಗಳನ್ನು ಪಾವತಿ ರಜಾ ದಿನಗಳೆಂದು ಪರಿಗಣಿಸಬೇಕೆಂದು ಕಾನೂನು ಹೇಳುತ್ತದೆ. ಆದರೆ, ಈ ಕಾನೂನು ಎಷ್ಟರಮಟ್ಟಿಗೆ ಪಾಲನೆಯಾಗುತ್ತಿದೆ? ಕಾರ್ಮಿಕ ಕಾನೂನುಗಳ ಪಾಲನೆಯ ಬಗ್ಗೆ ಯಾರು ನಿಗಾ ವಹಿಸುತ್ತಿದ್ದಾರೆ?

ಅಸಹಾಯಕರ ಕಾಲ್ನಡಿಗೆ ಪ್ರಸಂಗ ಇದು ಮೊದಲನೆಯದೂ ಅಲ್ಲ, ಕೊನೆಯದೂ ಅಲ್ಲ. ಶವ ಸಾಗಣೆ ವಾಹನಗಳಿಗೆ ಕೊಡಲು ಹಣವಿಲ್ಲದೆ, ಕಸದಗಾಡಿಯಲ್ಲಿ ಅಥವಾ ಬಂಡಿಯಲ್ಲಿ ಹೆಣ ಸಾಗಿಸುವ ಘಟನೆಗಳು ದೇಶದ ವಿವಿಧ ಭಾಗಗಳಿಂದ ಆಗಾಗ ವರದಿಯಾಗುತ್ತಲೇ ಇರುತ್ತವೆ. ಆಸ್ಪತ್ರೆಯಲ್ಲಿ ಮೃತಪಟ್ಟ ನಾಲ್ಕು ವರ್ಷದ ಮಗಳ ದೇಹವನ್ನು ಹೆಗಲ ಮೇಲೆ ಹೊತ್ತುಕೊಂಡ ತಂದೆ ಹತ್ತು ಕಿ.ಮೀ. ದೂರ ಕ್ರಮಿಸಿದ ಘಟನೆ ಕಳೆದ ವರ್ಷ ಛತ್ತೀಸಗಡದಿಂದ ವರದಿಯಾಗಿತ್ತು. ಇಂಥ ಘಟನೆಗಳು ವರದಿಯಾಗಲೆಲ್ಲ ಸಮಾಜದ ಒಂದು ವರ್ಗ ಮಮ್ಮಲ ಮರುಗಿ ಸುಮ್ಮನಾಗುತ್ತದೆ. ಈ ಘಟನೆಗಳಿಗೆ ನಾಚಿಕೆ ಪಡಬೇಕಾದ ರಾಜಕೀಯ ನಾಯಕರು, ತಮಗೂ ಅಸಹಾಯಕರ ಸಂಕಟಗಳಿಗೂ ಸಂಬಂಧವೇ ಇಲ್ಲ ಎನ್ನುವಂತೆ ನಡೆದುಕೊಳ್ಳುತ್ತಾರೆ. ಘಟನೆಯ ಬಗ್ಗೆ ನಮಗೆ ಮಾಹಿತಿಯಿಲ್ಲ ಎಂದು ಅಧಿಕಾರಿಗಳು ಕೈಚೆಲ್ಲುತ್ತಾರೆ. ಬಡವರು, ಅಸಹಾಯಕರ ಜೀವನದ ದಾರಿಗಳನ್ನು ನಿರ್ಲಕ್ಷಿಸಿ, ಷಟ್ಪಥ–ದಶಪಥಗಳನ್ನು ದೇಶದ ಅಭಿವೃದ್ಧಿಯ ರೂಪದಲ್ಲಿ ಬಿಂಬಿಸಲಾಗುತ್ತಿದೆ.

■ ರಘುನಾಥ ಚ.ಹ.



ಈಶ್ವರ್